# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 20 ಫ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ರಾಹುಲ್ ದಯಾನಂದ ಬೊಗಲೆ |
| ತಂದೆಯ ಹೆಸರು | : | ದಯಾನಂದ ಬೊಗಲೆ |
| ವಯಸ್ಸು | : | 26 ವರ್ಷ |
| ಕೆಲಸ | : | ಬಂದರು ಇಲಾಖೆಯಲ್ಲಿ ಕೆಲಸ, |
| ವಾಸ | : | ಶಿರವಾಡ, ಕಾರವಾರ |

**ದಿನಾಂಕಃ 25-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ತಂದೆ. ಚಾಸಾ-21 ನನ್ನ ಅಕ್ಕ. ಮೃತ ಪ್ರೇಮ ಕುಮಾರ ನನ್ನ ಬಾವ. ಚಾಸಾ-19 ರವರು ನನ್ನ ಬಾವನ ಅಣ್ಣ. ಚಾಸಾ-1 ನನ್ನ ತಂದೆಯವರು 2019 ರಲ್ಲಿ ತೀರಿಕೊಂಡಿರುತ್ತಾರೆ. ಚಾಸಾ-21 ನನ್ನ ಅಕ್ಕ ಹಾಗೂ ನನ್ನ ಬಾವ ಬೈತಕೋಲ್ ಪೋರ್ಟ್ ಕಾಲೋನಿಯಲ್ಲಿ ವಾಸವಾಗಿದ್ದರು. ಅವರಿಗೆ ಒಬ್ಬಳು ಮಗಳು ಇರುತ್ತಾಳೆ. ನನ್ನ ಬಾವನ ತಂದೆಯ ಮನೆ ಅವರು ವಾಸವಾಗಿದ್ದ ಮನೆಯಿಂದ 500 ಮೀಟರ್ ದೂರದಲ್ಲಿರುತ್ತದೆ. ಚಾಸಾ-19 ರವರು ಅವರ ತಂದೆಯೊಂದಿಗೆ ವಾಸವಾಗಿರುತ್ತಾರೆ. ನಾನು, ನನ್ನ ತಂದೆ-ತಾಯಿ ಶಿರವಾಡದಲ್ಲಿ ವಾಸವಾಗಿದ್ದೆವು. ಚಾಸಾ-21 ನನ್ನ ಅಕ್ಕನ ಮದುವೆ 2010 ರಲ್ಲಿ ಪ್ರೇಮ ಕುಮಾರ ರವರೊಂದಿಗೆ ಆಗಿರುತ್ತದೆ. ನನ್ನ ಅಕ್ಕನ ಮದುವೆ ಸಮಯದಲ್ಲಿ ನಾನು 7 ನೇ ತರಗತಿಯಲ್ಲಿ ಓದುತ್ತಿದ್ದೆ ಹಾಗೂ ನಾನು ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ. ಅದೇ ರೀತಿ ನಾನು ನನ್ನ ಬಾವನ ತಂದೆಯವರ ಮನೆಗೂ ಸಹ ಹೋಗಿ ಬರುತ್ತಿದ್ದೆ, ನನ್ನ ಬಾವನವರ ಅಕ್ಕ ಅಲ್ಲಿ ಟ್ಯೂಷನ್ ತೆಗೆದುಕೊಳ್ಳುತ್ತಿದ್ದ ಕಾರಣ, ನಾನು ಸಹ ಟ್ಯೂಷನ್‌ಗೆ ಹೋಗುತ್ತಿದ್ದೆ.

2. ನನ್ನ ಬಾವ ಶಿಪ್ಪಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು. 1 ನೇ ಆರೋಪಿ ನನಗೆ ಗೊತ್ತು, ಆತ ನನ್ನ ಬಾವನ ಗೆಳೆಯನಾಗಿದ್ದ ಹಾಗೂ ಆತ ನನ್ನ ಬಾವನ ಮನೆಗೆ ಹಾಗೂ ಅವರ ತಂದೆಯ ಮನೆಗೆ ಸಹ ಬಂದು -ಹೋಗುತ್ತಿದ್ದ. ನಾನು ಟ್ಯೂಷನ್ ಗೆ ಹೋಗುತ್ತಿದ್ದಾಗ ಆತ ನನ್ನ

ಬಾವನೊಂದಿಗೆ ಮಾತನಾಡುವುದನ್ನು ನಾನು ನೋಡಿರುತ್ತೇನೆ. 2 ನೇ ಆರೋಪಿ ಸಹ ನನಗೆ ಗೊತ್ತು, ಆತನೂ ಸಹ ನನ್ನ ಬಾವನ ಗೆಳೆಯನಾಗಬೇಕು, ಆತನೂ ಸಹ ನನ್ನ ಬಾವನ ಮನೆಗೆ ಬಂದು–ಹೋಗುತ್ತಿದ್ದ. 3 ನೇ ಆರೋಪಿಯನ್ನು ನಾನು ಮೊದಲ ಬಾರಿಗೆ ಠಾಣೆಯಲ್ಲಿ ನೋಡಿರುತ್ತೇನೆ. 4 ನೇ ಆರೋಪಿಯನ್ನು ನಾನು ಕಾರವಾರದಲ್ಲಿ ನೋಡಿರುತ್ತೇನೆ.

3. ಮೊದಲು ನನ್ನ ಬಾವ ಹಾಗೂ 1 ನೇ ಆರೋಪಿ ಶಿಪ್ಪಿಂಗ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ನಂತರ ಇಬ್ಬರೂ ಸೇರಿ ಪಾಲುದಾರಿಕೆ ಮೇಲೆ ಸ್ವಂತ ಶಿಪ್ಪಿಂಗ್ ಏಜೆನ್ಸಿಯನ್ನು ತೆರೆಯಲು ಮಾತನಾಡಿಕೊಂಡು, ಅದಕ್ಕೆ ಬೇಕಾದ ಪರವಾನಗಿಯನ್ನು 1 ನೇ ಆರೋಪಿ ಪಡೆದುಕೊಂಡು,ಕಾರವಾರ ಶಿಪ್ಪಿಂಗ್ ಏಜೆನ್ಸಿಯನ್ನು ಪ್ರಾರಂಭ ಮಾಡಿರುತ್ತಾನೆ. ಪರವಾನಗಿ ಸಿಕ್ಕ ನಂತರ 1 ನೇ ಆರೋಪಿ ನನ್ನ ಬಾವನ ಬಳಿ ಕಂಪನಿಯನ್ನು ನಾನು ಒಬ್ಬನೇ ನಡೆಸುತ್ತೇನೆ, ನೀನು ಬೇರೆ ನೋಡಿಕೊ ಎಂದು ಹೇಳಿರುತ್ತಾನೆ. ಈ ವಿಷಯವನ್ನು ನಾನು ನನ್ನ ಅಕ್ಕನ ಮನೆಗೆ ಹೋದಾಗ ನನ್ನ ಬಾವ ನನ್ನ ಬಳಿ ಹೇಳಿದ್ದರು. ಆ ಸಮಯದಲ್ಲಿ ಮಂಗಳೂರಿನ ಶರೀಫ್ ಎನ್ನುವವರು ಮಂಗಳೂರಿನಲ್ಲಿರುವ ತಮ್ಮ ಪೊಯಿನೂರು ಶಿಪ್ಪಿಂಗ್ ಕಂಪನಿಯ ಕಚೇರಿಯನ್ನು ಕಾರವಾರದಲ್ಲಿ ಪ್ರಾರಂಭಿಸುವುದಾಗಿ ಹೇಳಿ, ಅದನ್ನು ನನ್ನ ಬಾವನಿಗೆ ನೋಡಿಕೊಳ್ಳುವಂತೆ ಹೇಳಿರುತ್ತಾರೆ. ಅದರಂತೆ ನನ್ನ ಬಾವ ಪೊಯಿನೂರು ಶಿಪ್ಪಿಂಗ್ ಕಂಪನಿಯ ಕಾರವಾರದ ಪೋರ್ಟ ಕಾಲೋನಿಯಲ್ಲಿರುವ ಕಚೇರಿಯನ್ನು ನೋಡಿಕೊಳ್ಳುತ್ತಿರುತ್ತಾರೆ ಹಾಗೂ ಸದರಿ ಶಿಪ್ಪಿಂಗ್ ಕಂಪನಿಯ ವ್ಯವಹಾರ ಚೆನ್ನಾಗಿ ನಡೆಯುತ್ತಿದೆ ಎಂದು ನನ್ನ ಬಳಿ ಹೇಳಿರುತ್ತಾರೆ. ನನ್ನ ಬಾವ ಕೆಲಸ ಮಾಡುತ್ತಿದ್ದ ಶಿಪ್ಪಿಂಗ್ ಕಂಪನಿಯ ಕಚೇರಿಯ ಬಳಿ 2 ನೇ ಆರೋಪಿ ಬಂದು–ಹೋಗುತ್ತಿದ್ದ ಹಾಗೂ ಅಲ್ಲಿ ನಡೆಯುತ್ತಿದ್ದ ವ್ಯವಹಾರದ ಸಂಪೂರ್ಣ ಮಾಹಿತಿಯನ್ನು 1 ನೇ ಆರೋಪಿಗೆ ತಿಳಿಸುತ್ತಿದ್ದ ಎಂದು ನನ್ನ ಬಾವನ ಮೂಲಕ ತಿಳಿದು ಬಂತು. ಅದೇ ರೀತಿ 2 ನೇ ಆರೋಪಿ ನನ್ನ ಬಾವನ ಬಳಿ 1 ನೇ ಆರೋಪಿಗೆ ಯಾವುದೇ ಕೆಲಸ ಬರುತ್ತಿಲ್ಲ ಹಾಗೂ ಈ ವಿಷಯವಾಗಿ 1 ನೇ ಆರೋಪಿ ನನ್ನ ಬಾವನ ಮೇಲೆ ಸಿಟ್ಟಿನಲ್ಲಿರುತ್ತಾನೆ ಎಂದು ತಿಳಿಸಿರುತ್ತಾನೆ ಎಂದು ನನ್ನ ಬಾವ ನಮ್ಮ ಬಳಿ ಹೇಳಿದ್ದರು.

4. ಹೀಗಿರುವಾಗ ದಿಃ 16–10–2018 ರಂದು ಸಂಜೆ 06–00 ಗಂಟೆ ಸಮಯದಲ್ಲಿ ನನ್ನ ಅಕ್ಕ ನನಗೆ ಕರೆ ಮಾಡಿ, ಮದ್ಯಾಹ್ನ 02–00 ಗಂಟೆ ಸಮಯದಲ್ಲಿ 2 ನೇ ಆರೋಪಿ ನಿನ್ನ ಬಾವನಿಗೆ ಕರೆ ಮಾಡಿ, ಕದ್ರಾಗೆ ಹೋಗಿ ಬರೋಣ ಎಂದು ತಿಳಿಸಿದ್ದು, ಅದರಂತೆ ನಿನ್ನ ಬಾವ

ಸ್ಕೂಟರ್ ನಲ್ಲಿ ಹೋಗಿದ್ದು, ಈ ವರೆಗೂ ಬಂದಿಲ್ಲ ಹಾಗೂ ಅವರ ಮೊಬೈಲ್ ಗೆ ಕರೆ ಮಾಡಿದರೆ, ಅವರು ಕರೆಗಳನ್ನು ಸ್ವೀಕರಿಸುತ್ತಿಲ್ಲ, ನೀನು ಸಹ ಕರೆ ಮಾಡಿ ನೋಡು ಎಂದು ತಿಳಿಸಿದಳು. ಆಗ ನಾನು ನನ್ನ ತಂದೆಯವರಿಗೆ ವಿಷಯವನ್ನು ತಿಳಿಸಿ, ನಾನು ಸಹ ನನ್ನ ಬಾವನ ಮೊಬೈಲ್ ಗೆ 3-4 ಬಾರಿ ಕರೆ ಮಾಡಿದ್ದು, ಅವರು ನನ್ನ ಕರೆಗಳನ್ನೂ ಸಹ ಸ್ವೀಕರಿಸಿರುವುದಿಲ್ಲ. ಆ ನಂತರ ಸಂಜೆ 06-30 ಗಂಟೆಗೆ ನಾನು ಮತ್ತು ನನ್ನ ತಂದೆ ನನ್ನ ಅಕ್ಕನ ಮನೆಗೆ ಬಂದು, ವಿಚಾರಿಸಿದಾಗ, 2 ನೇ ಆರೋಪಿ ಕರೆ ಮಾಡಿದ ವಿಷಯ ಹಾಗೂ ನನ್ನ ಬಾವ ಸ್ಕೂಟರ್ ತೆಗೆದುಕೊಂಡು ಹೋದ ವಿಷಯವನ್ನು ಹೇಳಿರುತ್ತಾರೆ.

5. ಆ ನಂತರ ನನ್ನ ಅಕ್ಕ ಚಾಸಾ-19 ರವರಿಗೆ ಕರೆ ಮಾಡಿ, ವಿಷಯವನ್ನು ತಿಳಿಸಿ, ನಾನು ಹಾಗೂ ನನ್ನ ತಂದೆ ಚಾಸಾ-19 ರವರನ್ನು ಕಾರವಾದಲ್ಲಿ ಭೇಟಿಯಾಗಿ, ಎಲ್ಲಾ ಹುಡುಕಾಡಿದೆವು, ಆದರೆ ನನ್ನ ಬಾವ ಹಾಗೂ ಅವರು ತೆಗೆದುಕೊಂಡು ಹೋದ ಸ್ಕೂಟರ್ ಎಲ್ಲಯೂ ಪತ್ತೆಯಾಗಲಿಲ್ಲ. ಆ ನಂತರ ನಮಗೆ ಗಾಬರಿಯಾಗಿ, ನಾನು, ನನ್ನ ತಂದೆ ಹಾಗೂ ಚಾಸಾ-19 ರವರು ಸೇರಿ ರಾತ್ರಿ ಸುಮಾರು 09-00 ಗಂಟೆಗೆ ಕಾರವಾರ ನಗರ ಪೊಲೀಸ್ ಠಾಣೆಗೆ ಹೋಗಿ ನನ್ನ ಬಾವ ಕಾಣೆಯಾದ ಬಗ್ಗೆ ದೂರನ್ನು ಕೊಡಲು ಹೋಗಿದ್ದೆವು, ಅಲ್ಲಿ ಪೊಲೀಸರು ನಮಗೆ ಇದೊಂದು ರಾತ್ರಿ ನೋಡಿ, ಒಂದು ವೇಳೆ ಬರದೆ ಇದ್ದರೇ, ನಾಳೆ ಬಂದು ದೂರು ನೀಡಿ ಎಂದು ಹೇಳಿರುತ್ತಾರೆ. ಅದರಂತೆ ನಾವು ವಾಪಸು ಮನೆಗ ಬಂದು ಇಡೀ ರಾತ್ರಿ ಕಾದರೂ ಸಹ ನನ್ನ ಬಾವ ಬಂದಿರುವುದಿಲ್ಲ, ಆದ್ದರಿಂದ ಮರು ದಿನ ದಿಃ 17-10-2018 ರಂದು ಬೆಳಿಗ್ಗ 09-30 ಗಂಟೆಗೆ ಪುನಃ ನಾನು, ನನ್ನ ತಂದೆ ಹಾಗೂ ಚಾಸಾ-19 ರವರು ಸೇರಿ ಪೊಲೀಸ್ ಠಾಣೆಗೆ ಹೋಗಿ ನನ್ನ ಬಾವ ಕಾಣೆಯಾದ ಬಗ್ಗೆ ದೂರನ್ನು ನೀಡಿರುತ್ತೇವೆ. ಅಲ್ಲಿ ಪೊಲೀಸರು ನಮ್ಮ ದೂರನ್ನು ಪಡೆದುಕೊಂಡು ನನ್ನ ಬಾವನ ಸಂಪೂರ್ಣ ಮಾಹಿತಿಯನ್ನು ಹಾಗೂ ಅವರ ಮೊಬೈಲ್ ನಂಬರ್ ನ್ನು ಪಡೆದುಕೊಂಡಿರುತ್ತಾರೆ. ಆ ನಂತರ ನಾವು ಮನೆಗೆ ವಾಪಸು ಬಂದಿರುತ್ತೇವೆ.

6. ಅದೇ ದಿನ ಸಂಜೆ ಪೊಲೀಸ್ ಠಾಣೆಯಿಂದ ನನ್ನ ತಂದೆಯ ಮೊಬೈಲ್ ಗೆ ಕರೆ ಬಂದಿದ್ದು, ನಮ್ಮನ್ನು ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಆ ಕೂಡಲೇ ನಾನು, ನನ್ನ ತಂದೆ, ಚಾಸಾ-19 ರವರು ಠಾಣೆಗೆ ಹೋಗಿಡರುತ್ತೇವೆ, ಅಲ್ಲಿ ಪೊಲೀಸರು ಪ್ರೇಮಕುಮಾರ ರವರ ಮೊಬೈಲ್ ನ ಲೊಕೇಷನ್ ನನ್ನು ಟ್ರೇಸ್ ಮಾಡಿರುತ್ತೇವೆ ಹಾಗೂ ಅವರ ಮೊಬೈಲ್ ನ

ಲೊಕೇಷನ್ ಕದ್ರಾದ ಉಳುವಿಯ ಬಳಿ, ಮುಂದುವರೆದು ಮಹಾರಾಷ್ಟ್ರದ ಕಡೆಗೆ ಹೋಗಿರುತ್ತದೆ ಹಾಗೂ ಕೊನೆಯ ಲೊಕೇಷನ್ ಸತಾರದಲ್ಲಿ ಅಂತ್ಯಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ನನ್ನ ಬಾವನನ್ನು ಪತ್ತೆ ಹಚ್ಚುವ ಸಲುವಾಗಿ ಮಹಾರಾಷ್ಟ್ರಕ್ಕೆ ಹೋಗಬೇಕಾಗಿದ್ದು, ತಮ್ಮ ಜೊತೆಯಲ್ಲಿ ನಮ್ಮನ್ನು ಸಹ ಬರುವಂತೆ ತಿಳಿಸಿರುತ್ತಾರೆ. ಅದರಂತೆ ರಾತ್ರಿ 10-30 ಗಂಟೆಗೆ ನಾನು, ಚಾಸಾ-19 ಹಾಗೂ ನನ್ನ 2 ಜನ ಗೆಳೆಯರು ಸೇರಿ ಕಾರ್ ನ್ನು ಬಾಡಿಗೆಗೆ ಪಡೆದು 2 ಜನ ಪೊಲೀಸರೊಂದಿಗೆ ಮಹಾರಾಷ್ಟ್ರಕ್ಕೆ ಹೋಗಿರುತ್ತೇವೆ.

7. ದಿಃ 18-10-2018 ರಂದು ಬೆಳಿಗ್ಗೆ 07-00 ಗಂಟೆಗೆ ಸುಮಾರಿಗೆ ಸತಾರಕ್ಕೆ ತಲುಪಿ, ಅಲ್ಲಿನ ಪೋಲಿಸ್ ಠಾಣೆಗೆ ಹೋದೆವು, ನಮ್ಮ ಜೊತೆ ಬಂದಿದ್ದ 2 ಜನ ಪೊಲೀಸರು ಅಲ್ಲಿನ ಪೊಲೀಸರಿಗೆ ವಿಷಯವನ್ನು ತಿಳಿಸಿ, ಅವರೂ ಸಹ ತಮ್ಮ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ನಮ್ಮ ಜೊತೆ ಕಳುಹಿಸಿರುತ್ತಾರೆ. ಆ ನಂತರ ನಾವು ಮೊಬೈಲ್ ನ ಕೊನೆಯ ಲೊಕೇಷನ್ ತೋರಿಸಿದ ಸ್ಥಳಕ್ಕೆ ಹೋದಾಗ, ಸದರಿ ಸ್ಥಳವು ಗೊಡೌನ್ ಆಗಿದ್ದು, ಅಲ್ಲಿ ಪೊಲೀಸರು ಎಲ್ಲ ಕಡೆ ಹುಡುಕಾಡಿ ನೋಡಿದಾಗ, ಅಲ್ಲಿ ಏನು ಪತ್ತೆಯಾಗಿರುವುದಿಲ್ಲ. ಆ ನಂತರ ನಾವು ವಾಪಸು ಬರಲು ಹೊರಟು, ಬೆಳಗಾಂವ ತಲುಪಿ, ರಾತ್ರಿ 09-00 ಗಂಟೆ ಸುಮಾರಿಗೆ ಊಟ ಮಾಡುತ್ತಿದ್ದಾಗ, ನಮ್ಮ ಜೊತೆ ಇದ್ದ ಪೊಲೀಸರಿಗೆ ಕಾರವಾರ ಪೊಲೀಸ್ ಠಾಣೆಯಿಂದ ಕರೆ ಬಂದಿದ್ದು, ಅದರಲ್ಲಿ 2 ನೇ ಆರೋಪಿ ಬಗ್ಗೆ ಮಾಹಿತಿ ಬಂದಿದ್ದು, ಈ ಕೂಡಲೇ ನಾವು ಕೋಲಾಪುರಕ್ಕೆ ಹೋಗುವಂತೆ ಸೂಚಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆಗ ನಾವು ಬೆಳಗಾಂವಿಯಿಂದ ಹೊರಟು, ದಿಃ 19-10-2018 ರಂದು ಬೆಳಿಗ್ಗೆ 07-00 ರಿಂದ 07-30 ರ ಸುಮಾರಿಗೆ ಕೋಲಾಪುರಕ್ಕೆ ತಲುಪಿ, ಅಲ್ಲಿ ಒಂದು ಟ್ರಾವೆಲ್ ಏಜೆನ್ಸಿಗೆ ಹೋಗಿರುತ್ತೇವೆ. ಅಲ್ಲಿ ನಮ್ಮ ಜೊತೆ ಇದ್ದ 2 ಜನ ಪೋಲಿಸರು ಸದರಿ ಟ್ರಾವೆಲ್ಸ್ ನವರೊಂದಿಗೆ ಮಾತನಾಡಿ, 2 ನೇ ಆರೋಪಿ ಬಗ್ಗೆ ವಿಚಾರಿಸಿದಾಗ, ಅವರು ತಮ್ಮ ರಿಜಿಸ್ಟರ್ ನ್ನು ಪರಿಶೀಲಿಸಿ, 2 ನೇ ಆರೋಪಿ ಕೋಲಾಪುರದಿಂದ ಮುಂಬೈಗೆ ಬಸ್ ಟಿಕೆಟ್ ನ್ನು ಬುಕ್ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ ಹಾಗೂ 2 ನೇ ಆರೋಪಿ ತನ್ನ ಬಳಿ 3 ಸಿಮ್ ಗಳಿದ್ದು,ಕರೆ ಮಾಡಲು ನನ್ನ ಬಳಿ ಮೊಬೈಲ್ ಇರುವುದಿಲ್ಲ, ಆದ್ದರಿಂದ ತಮ್ಮ ಮೊಬೈಲ್ ಕೊಡಿ, ಒಂದು ಕರೆ ಮಾಡಿ ವಾಪಸು ನೀಡುತ್ತೇನೆ ಎಂದು ಕೇಳಿದ್ದು, ಅದರಂತೆ ನಾನು ಅವರಿಗೆ ನನ್ನ ಮೊಬೈಲ್ ಕೊಟ್ಟಿದ್ದೆ, ಅವರು ನನ್ನ ಮೊಬೈಲ್ ಮೂಲಕ, ಒಂದು ನಂಬರ್ ಗೆ ಕರೆ ಮಾಡಿ, ಸುಮಾರು 15 ನಿಮಿಷ ಮಾತನಾಡಿ, ಪುನಃ ವಾಪಸು ನನಗೆ ಮೊಬೈಲ್ ನೀಡಿರುತ್ತಾರೆ ಎಂದು ಹೇಳಿರುತ್ತಾರೆ. ಪೊಲೀಸರು ಟ್ರಾವೆಲ್ಸ್ ನವರ ಮೊಬೈಲ್ ನ್ನು ಪರಿಶೀಲಿಸಿದಾಗ, 2 ನೇ

ಆರೋಪಿ ತಾನು ಕರೆ ಮಾಡಿದ ನಂಬರ್ ನ್ನು ಡಿಲೀಟ್ ಮಾಡಿರುವುದು ಕಂಡುಬಂದಿರುತ್ತದೆ. ಆ ನಂತರ ನಾವು ಟ್ರಾವೆಲ್ಸ್ ನವರ ಮೊಬೈಲ್ ನಂಬರ್ ನ್ನು ಪಡೆದುಕೊಂಡು, ಸ್ಥಳೀವಿಯ ಐಡಿಯಾ ಮೊಬೈಲ್ ಸೆಂಟರ್ ಹೋಗಿ, ವಿಚಾರಿಸಿದಾಗ, ಅವರಿಂದ ನಮಗೆ ಮಾಹಿತಿ ಸಿಕ್ಕಿರುವುದಿಲ್ಲ, ಆ ನಂತರ ನಮ್ಮ ಜೊತೆ ಬಂದಿದ್ದ ಪೊಲೀಸರು ಕಾರವಾರ ಪೊಲೀಸ್ ಠಾಣೆಗ ಕರೆ ಮಾಡಿ ಟ್ರಾವೆಲ್ಸ್‌ನವರ ಮೊಬೈಲ್ ನಂಬರ್ ನ್ನು ನೀಡಿರುತ್ತಾರೆ. ಆ ನಂತರ ನಾವು ಅಲ್ಲಿಂದ ಹೊರಟು ರಾತ್ರಿ 09–00 ಗಂಟೆಗೆ ಜೊಯಿಡಾ ತಲುಪಿದಾಗ, ಪುನಃ ಪೊಲೀಸ್ ಠಾಣೆಯಿಂದ ನಮ್ಮ ಜೊತೆ ಬಂದಿದ್ದ ಪೋಲಿಸರಿಗೆ ಕರೆ ಬಂದಿದ್ದು, ಅವರು ನಮ್ಮನ್ನು ಖಾನಾಪುರಕ್ಕೆ ಹೋಗುವಂತೆ ತಿಳಿಸಿರುತ್ತಾರೆ. ಆದ್ದರಿಂದ ನಾವು ಪುನಃ ರಾತ್ರಿ 12–00 ಗಂಟೆಗೆ ಖಾನಾಪುರ ಪೊಲೀಸ್ ಠಾಣೆಗೆ ಹೋಗಿ, ನಮ್ಮ ಜೊತೆ ಬಂದಿದ್ದ ಪೋಲಿಸರು ಖಾನಾಪುರ ಪೊಲೀಸರೊಂದಿಗೆ ಮಾತನಾಡಿದರು. ಆ ನಂತರ ಸುಮಾರು 15–20 ನಿಮಿಷಗಳ ನಂತರ ಖಾನಾಪುರ ಪೊಲೀಸರು ವಾಹಿದ್ ಎನ್ನುವ ವ್ಯಕ್ತಿಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು. ಅಲ್ಲಿ ಪೊಲೀಸರು ಸದರಿ ವ್ಯಕ್ತಿಯನ್ನು ನಮ್ಮ ಸಮಕ್ಷಮ ವಿಚಾರಿಸಿದಾಗ, ಆತ ಖಾನಾಪುರದಲ್ಲಿ ತನ್ನ ಗ್ಯಾರೆಜ್ ಇದ್ದು, 2 ನೇ ಆರೋಪಿ ನನ್ನ ಬಳಿ ಬಂದು, ತಾನು ತಂದಿದ್ದ ಜೆನ್ ಕಾರ್ ನ್ನು ನಮ್ಮ ಗ್ಯಾರೆಜ್ ನಲ್ಲಿ ನಿಲ್ಲಿಸಿ, 2 ದಿನಗಳ ನಂತರ ಬಂದು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿರುತ್ತಾನೆ ಎಂದು ವಾಹಿದ್ ರವರು ತಿಳಿಸಿರುತ್ತಾರೆ ಹಾಗೂ ಆತ 2 ನೇ ಆರೋಪಿ ನನಗೆ ಪರಿಚಯ ಇರುತ್ತಾನೆ ಎಂದು ತಿಳಿಸಿರುತ್ತಾನೆ. ಅಲ್ಲದೇ 1 ನೇ ಆರೋಪಿಗ ನನ್ನ ಮೊಬೈಲ್ ಗೆ ಕರೆ ಮಾಡಿ, 2 ನೇ ಆರೋಪಿ ನಿಲ್ಲಿಸಿ ಹೋಗಿರುವ ಜೆನ್ ಕಾರ್ ನ್ನು ಜೆ.ಸಿ.ಬಿ ಯಿಂದ ಹೊಂಡ ತೋಡಿ, ಮುಚ್ಚಿ ಹಾಕು, ಇಲ್ಲವಾದರೆ ಅದನ್ನು ಸ್ಕ್ರಾಪ್ ಮಾಡಿ, ಯಾರಿಗಾದರೂ ಮಾರಾಟ ಮಾಡು ಎಂದು ತಿಳಿಸಿರುತ್ತಾನೆ ಹಾಗೂ ಸದರಿ ಕರೆಯ ಸಂಭಾಷಣೆಯ ನನ್ನ ಮೊಬೈಲ್ ನಲ್ಲಿ ಸೇವ್ ಆಗಿರುತ್ತದೆ ಎಂದು ತಿಳಿಸಿರುತ್ತಾನೆ. ಆಗ ಪೊಲೀಸರು ಸದರಿ ಸಂಭಾಷಣೆಯನ್ನು ನಮ್ಮ ಮುಂದೆ ಆನ್ ಮಾಡಿ, ಕೇಳಿಸಿಕೊಂಡಾಗ, ಸದರಿ ಸಂಭಾಷಣೆಯಲ್ಲಿ 1 ನೇ ಆರೋಪಿ  2 ನೇ ಆರೋಪಿಯು ನಿಲ್ಲಿಸಿ ಹೋಗಿರುವ ಜೆನ್ ಕಾರ್ ನ್ನು ಜೆ.ಸಿ.ಬಿ ಯಿಂದ ಹೊಂಡ ತೋಡಿ, ಮುಚ್ಚಿ ಹಾಕು, ಇಲ್ಲವಾದರೆ ಅದನ್ನು ಸ್ಕ್ರಾಪ್ ಮಾಡಿ, ಯಾರಿಗಾದರೂ ಮಾರಾಟ ಮಾಡು ಎಂದು ತಿಳಿಸಿರುವುದನ್ನು ನಾವು ಕೇಳಿಸಿಕೊಂಡಿರುತ್ತೇವೆ.

8. ನಾವು ಖಾನಾಪುರ ಪೊಲೀಸ್ ಠಾಣೆಯ ಬಳಿ ಇರುವಾಗಲೇ ಕಾರವಾರ ಪೊಲಿಸ್ ಠಾಣೆಯಿಂದ ಮತ್ತೆ ಕರೆ ಬಂದಿದ್ದು, ಅದರಲ್ಲಿ ಪೋಲಿಸರು ಟ್ರಾವೇಲ್ಸ್‌ನವರ ಮೊಬೈಲ್ ಕಾಲ್ ರಿಜಿಸ್ಟರನ್ನು ಪರಿಶೀಲಿಸಿದಾಗ ಸದರಿ ನಂಬರ್ ನಿಂದ ಮೊದಲನೇ ಕರೆ 2 ನೇ ಆರೋಪಿಯ ಹೆಂಡತಿಗೆ, ಎರಡನೇ ಕರೆ 1 ನೇ ಆರೋಪಿಗೆ ಹಾಗೂ ಮೂರನೇ ಕರೆ ವಾಹಿದ್ ಗೆ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ. ಆಗ ನಮ್ಮ ಜೊತೆ ಇದ್ದ ಪೊಲೀಸರು ನಮ್ಮನ್ನು ಕಾರವಾರಕ್ಕೆ ವಾಪಸು ಹೋಗುವಂತೆ ತಿಳಿಸಿ, ಅವರು ಖಾನಾಪುರದಲ್ಲಿ ಉಳಿದುಕೊಂಡಿರುತ್ತಾರೆ. ಆ ದಿನ ರಾತ್ರಿಯಾದ ಕಾರಣ ನಾವು ಅಲ್ಲಿಯೇ ಉಳಿದುಕೊಂಡು, ಮರುದಿನ ಬೆಳಿಗ್ಗೆ 07–00 ಗಂಟೆಗೆ ಖಾನಾಪುರದಿಂದ ಹೊರಟು, ಕಾರವಾರಕ್ಕೆ ಬಂದು, ಪೊಲೀಸ್ ಠಾಣೆಗೆ ಹೋಗಿ, ನಂತರ ನಾವು ಮನೆಗೆ ಹೋಗಿರುತ್ತೇವೆ. ನಾನು ಮನೆಗೆ ಹೋದ ನಂತರ ನನ್ನ ತಂದೆಗೆ ಎಲ್ಲಾ ವಿಷಯವನ್ನು ತಿಳಿಸಿರುತ್ತೇನೆ. ನಾನು ಹೇಳಿದ ವಿಷಯವನ್ನು ಕೇಳಿದ ನಂತರ ನನ್ನ ತಂದೆಯವರು ಹಾಗೂ ಚಾಸಾ–19 ರವರು ದಿಃ 21–10–2018 ರಂದು ಬೆಳಿಗ್ಗೆ ಪೊಲೀಸ್ ಠಾಣೆಗೆ ಹೋಗಿ 1 ಮತ್ತು 2 ನೇ ಆರೋಪಿಗಳು ಸೇರಿ ಪ್ರೇಮಕುಮಾರನನ್ನು ಅಪಹರಣ ಮಾಡಿರಬಹುದೆಂಬ ಸಂಶಯದಿಂದ 1 ಮತ್ತು 2 ನೇ ಆರೋಪಿಗಳ ವಿರುದ್ಧ ದೂರನ್ನು ನೀಡಿರುತ್ತಾರೆ.

9. ದಿಃ 21–10–2018 ರಂದು ಸಂಜೆ ಪೊಲೀಸರು ನನ್ನ ತಂದೆಗೆ ಕರೆ ಮಾಡಿ, ಠಾಣೆಗ ಬರುವಂತೆ ಸೂಚಿಸಿರುತ್ತಾರೆ. ಆಗ ನನ್ನ ತಂದೆ ಹಾಗೂ ಚಾಸಾ–19 ರವರು ಪೋಲಿಸ್ ಠಾಣೆಗೆ ಹೋಗಿದ್ದು, ಅಲ್ಲಿ ಪೊಲೀಸರು ನನ್ನ ತಂದೆ ಹಾಗೂ ಚಾಸಾ–19 ರವರಿಗೆ ದಾಂಡೇಲಿಯಿಂದ ಒಂದು ಮಾಹಿತಿ ಬಂದಿದ್ದು, ನೀವು ನಮ್ಮ ಪೊಲೀಸರ ಜೊತೆ ಹೋಗಬೇಕೆಂದು ತಿಳಿಸಿರುತ್ತಾರೆ. ಮರುದಿನ ದಿಃ 22–10–2018 ರ ಬೆಳಿಗ್ಗೆ ಪೊಲೀಸರ ಜೊತೆ ನಾನು ಹೋಗಿರುತ್ತೇನೆ. ಅಲ್ಲಿ ಪೊಲೀಸರು 3 ನೇ ಆರೋಪಿಯ ಹೆಂಡತಿಯ ಮನೆಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದಾಗ 3 ನೇ ಆರೋಪಿ ಮನೆಯಲ್ಲಿದ್ದು, ಪೋಲಿಸರು ಆತನನ್ನು ವಶಕ್ಕೆ ಪಡೆದು, ಕಾರವಾರ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದರು. ನಂತರ ನಾನು ಮನೆಗೆ ಬಂದು, ನನ್ನ ತಂದೆಯವರಿಗೆ ವಿಷಯ ತಿಳಿಸಿದೆ.

10. ದಿಃ 22–10–2018 ರಂದು ರಾತ್ರಿ ಕಾರವಾರ ಪೊಲೀಸ್ ಠಾಣೆಯಿಂದ ನನ್ನ ತಂದೆಗೆ ಕರೆ ಮಾಡಿ, ಮರುದಿನ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಅದರಂತೆ ದಿಃ 23–10–2018

ರಂದು ಬೆಳಿಗ್ಗೆ 08–00 ಗಂಟೆಗೆ ನಾನು, ನನ್ನ ತಂದೆ ಮತ್ತು ಚಾಸಾ–19 ರವರು ಪೊಲೀಸ್ ಠಾಣೆಗೆ ಹೋದೆವು. ಅಲ್ಲಿ 2 ಜನ ಪಂಚರು ಹಾಜರಿದ್ದರು, ಪಿ.ಎಸ್.ಐ ರವರು ನಮ್ಮನ್ನು ತಮ್ಮ ಕೊಠಡಿಗೆ ಕರೆಯಿಸಿ, 3 ನೇ ಆರೋಪಿಯನ್ನು ಸಹ ಕರೆದುಕೊಂಡು ಬಂದರು. ಅಲ್ಲಿ ಪೊಲೀಸರು 3 ನೇ ಆರೋಪಿಯ ಬಳಿ ಪ್ರೇಮಕುಮಾರನನ್ನು ಯಾಕೆ ಕೊಲೆ ಮಾಡಿದಿಯಾ ಎಂದು ಕೇಳಿದರು, ಆಗ 3 ನೇ ಆರೋಪಿ "ನಾನು ಮತ್ತು 2 ನೇ ಆರೋಪಿ ಸೇರಿ ಒಬ್ಬ ವ್ಯಕ್ತಿಗೆ ಉಳವಿಯ ಆಕಳಗವಿ ಅರಣ್ಯ ಪ್ರದೇಶದಲ್ಲಿ ಕೊಲೆ ಮಾಡಿ, ಬಿಸಾಡಿರುತ್ತೇವೆ ಹಾಗೂ ಮೃತ ವ್ಯಕ್ತಿ 2 ನೇ ಆರೋಪಿಗೆ ಪರಿಚಯನಿದ್ದು, ನನಗೆ ಪರಿಚಯ ಇಲ್ಲ" ಎಂದು ನುಡಿದಿರುತ್ತಾನೆ. ಆ ನಂತರ 3 ನೇ ಆರೋಪಿಯನ್ನು ಪಿ.ಎಸ್.ಐ ಕೊಠಡಿಯಿಂದ ಹೊರಗೆ ಕಳುಹಿಸಿದ ನಂತರ, 2 ನೇ ಆರೋಪಿಯನ್ನು ಪಿ.ಎಸ್.ಐ ಕೊಠಡಿಗೆ ಕರೆದುಕೊಂಡು ಬಂದರು. ಅಲ್ಲಿ ಪೊಲೀಸರು 2 ನೇ ಆರೋಪಿಯನ್ನು ಯಾರನ್ನು ಕೊಲೆ ಮಾಡಿದೆ ಎಂದು ಕೇಳಿದ್ದು, ಅದಕ್ಕೆ 2 ನೇ ಆರೋಪಿಯು ನಾನು ಹಾಗೂ 3 ನೇ ಆರೋಪಿ ಸೇರಿ ಪ್ರೇಮಕುಮಾರನನ್ನು ಉಳವಿಯ ಆಕಳಗವಿ ಅರಣ್ಯ ಪ್ರದೇಶದಲ್ಲಿ ಕೊಲೆ ಮಾಡಿ ಹಾಕಿರುತ್ತೇವೆ ಎಂದು ಹೇಳಿರುತ್ತಾನೆ. ಆಗ ಪೊಲೀಸರು ಯಾವ ಕಾರಣಕ್ಕಾಗಿ ಕೊಲೆ ಮಾಡಿದೆ ಎಂದು ಕೇಳಿದಾಗ, 2 ನೇ ಆರೋಪಿಯು ನಮ್ಮ ಸಮಕ್ಷಮ "1 ನೇ ಆರೋಪಿಯು ನನ್ನ ಬಳಿ ಪ್ರೇಮಕುಮಾರನ ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದು, ನನಗೆ ಯಾವುದೇ ಕೆಲಸ ಬರದೆ ಇದ್ದರೇ, ಒಂದು ದಿನ ನನ್ನ ಕಂಪನಿಯನ್ನು ಮುಚ್ಚಬೇಕಾಗುತ್ತದೆ, ಆದ್ದರಿಂದ ನೀನು, ಯಾರಾದರು ಒಬ್ಬರ ಸಹಾಯ ಪಡೆದುಕೊಂಡು ಪ್ರೇಮಕುಮಾರನನ್ನು ಕೊಲೆ ಮಾಡು ಹಾಗೂ ನಾನು ನಿನಗೆ, ನನ್ನ ಕಂಪನಿಯಲ್ಲಿ ಒಳ್ಳೆಯ ಕೆಲಸವನ್ನು ಕೊಡುತ್ತೇನೆ ಹಾಗೂ ರೂ.2,00,000/– ಹಣವನ್ನು ಕೊಡುತ್ತೇನೆ ಅದಲ್ಲದೇ ನಿನಗೆ ಸಹಾಯ ಮಾಡುವ ವ್ಯಕ್ತಿಗೂ ಸಹ ರೂ.2,00,000/– ಹಣವನ್ನು ಕೊಡುತ್ತೇನೆ ಎಂದು ಹೇಳಿದ" ಎಂದು ಹೇಳಿರುತ್ತಾರೆ. ಆಗ ಪೋಲಿಸರು 2 ನೇ ಆರೋಪಿಗೆ ಎಲ್ಲಿ ಕೊಲೆ ಮಾಡಿರುತ್ತೀರಿ ಎಂದು ಕೇಳಿದಾಗ, 2 ನೇ ಆರೋಪಿಯು ಆಕಳಗವಿ ಅರಣ್ಯ ಪ್ರದೇಶದಲ್ಲಿ ಕೊಲೆ ಮಾಡಿರುವುದಾಗಿ ಹಾಗೂ ತನ್ನ ಜೊತೆ ಬಂದರೆ, ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ.

11. ನಂತರ 09–45 ಗಂಟೆಗೆ ಪೊಲೀಸರು, ತಮ್ಮ ಸಿಬ್ಬಂದಿಗಳೊಂದಿಗೆ 2 ಮತ್ತು 3 ನೇ ಆರೋಪಿಗಳನ್ನು, 2 ಜನ ಪಂಚರನ್ನು ಹಾಗೂ ನನ್ನನ್ನು ಮತ್ತು ಚಾಸಾ–19 ರವರನ್ನು ತಮ್ಮ ವ್ಯಾನ್ ನಲ್ಲಿ ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೊರಟರು, ನಾವು ಹೋಗುತ್ತಿದ್ದ

ವ್ಯಾನ್ ನ ಮುಂದುಗಡೆ 2 ಪೊಲೀಸ್ ಜೀಪ್ ಗಳು ಹೋಗುತ್ತಿದ್ದವು ಹಾಗೂ ಹಿಂದುಗಡೆ 2 ಪೊಲೀಸ್ ಜೀಪ್ ಗಳು ಬರುತ್ತಿದ್ದವು ಹಾಗೂ ಒಂದು ಅಂಬ್ಯುಲೇನ್ಸ ನಮ್ಮ ಜೊತೆಯಲ್ಲಿ ಬಂದಿತ್ತು. ವ್ಯಾನ್ ನ ಮುಂದಿನ ಭಾಗದಲ್ಲಿ 2 ಮತ್ತು 3 ನೇ ಆರೋಪಿಗಳು ಕುತಿಳಿದ್ದು, ಅವರು ದಾರಿ ತೋರಿಸುತ್ತಿದ್ದರು ಹಾಗೂ ನಾವು ಅದೇ ವ್ಯಾನ್ ನ ಹಿಂದುಗಡೆ ಕುತಿಳಿದ್ದೆವು. ಆಕಳಗವಿ ಚೆಕ್ ಪೋಸ್ಟ್ ಬಳಿ ತಲುಪಿದಾಗ, 2 ನೇ ಆರೋಪಿ ವ್ಯಾನ್ ನಿಲ್ಲಿಸಲು ಸೂಚಿಸಿದ್ದು, ಅದರಂತೆ ಪೋಲಿಸರು ವ್ಯಾನ್ ನಿಲ್ಲಿಸಿದರು, ಅಲ್ಲಿ 2 ಮತ್ತು 3 ನೇ ಆರೋಪಿಗಳು ವ್ಯಾನ್ ನಿಂದ ಇಳಿದು, ಅರಣ್ಯ ಪ್ರದೇಶದ ಇಳಿಜಾರಿನ ಕಡೆಗೆ ಕರೆದುಕೊಂಡು ಹೋದರು. ಅಲ್ಲಿ ಸುಮಾರು 1 ಕಿ.ಮೀ ನಡೆದುಕೊಂಡು ಹೋಗಿ, ಎಡಕ್ಕೆ ತಿರುಗಿ ಪುನಃ ಇಳಿಜಾರಿನ ಪ್ರದೇಶದಲ್ಲಿ 1 ½ ಕಿ.ಮೀ ನಡೆದುಕೊಂಡು ಹೋದರು, ಅಲ್ಲಿ ಒಂದು ಒಣಗಿದ ಮರ ಕೆಳಗೆ ಬಿದ್ದಿದ್ದು, ಮರದ ಪಕ್ಕದಲ್ಲಿ ಬಿದ್ದಿದ್ದ, ನನ್ನ ಬಾವನ ಶವವನ್ನು 2 ಮತ್ತು 3 ನೇ ಆರೋಪಿಗಳು ತೋರಿಸಿರುತ್ತಾರೆ.

12. ನಾನು ಹಾಗೂ ಚಾಸಾ-19 ರವರು ಮೃತ ದೇಹವನ್ನು ನೋಡಿ ಗುರುತಿಸಿದ್ದು, ಅದು ನನ್ನ ಬಾವನಾದ ಪ್ರೇಮಕುಮಾರನ ಶವವಾಗಿರುತ್ತದೆ. ನಾವು ಶವವನ್ನು ನೋಡಿದಾಗ ಮುಖದ ಮೇಲೆ, ಕುತ್ತಿಗೆಯ ಮೇಲೆ, ಮೈಮೇಲೆ ಕತ್ತರಿಸಿದ ಗಾಯಗಳು ಆಗಿದ್ದವು. ಶವದ ಮೇಲೆ ಒಂದು ನಿಕ್ಕರ್ ಇತ್ತು, ಶವದ ಪಕ್ಕದಲ್ಲಿ ಹಸಿರು ಬಣ್ಣ ಬಟ್ಟೆ ಬಿದ್ದಿದ್ದು, ಅದಕ್ಕೆ ರಕ್ತ ತಾಗಿತ್ತು ಹಾಗೂ ಮಳೆ ಬಿದ್ದ ಕಾರಣದಿಂದಾಗಿ ಅದು ಸ್ವಲ್ಪ ಕೆಸರಾಗಿತ್ತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ